ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2366/2015

ಚಾಸಾ:1 ಪ್ರಾಸಾ:1

ದಿನಾಂಕ: 18.02.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಬಿ.ವಿ ರಾಘವೇಂದ್ರ |
| ತಂದೆಯ ಹೆಸರು | : | ಬಿ. ಎಸ್ ವಾಸುದೇವ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಅಕೌಂಟೆಂಟ್ |
| ವಾಸ ಸ್ಥಳ | : | ಕೊಟೇಶ್ವರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಕೊಟೇಶ್ವರದ ನೆಂಪು ಎಂಬಲ್ಲಿ ನಾವು ವಾಸವಾಗಿದ್ದು, ಅಕೌಂಟೆಂಟ್ ಕೆಲಸ ಮಾಡುತ್ತಿದ್ದೇನೆ. ದಿ: 07-12-2014 ರಂದು ಬೆಳಗ್ಗೆ 12 ಗಂಟೆಗೆ ಆನೆಗುಡ್ಡೆಯಲ್ಲಿ ಪೂಜೆ ಕೊಡಲು ನಾನು, ನನ್ನ ತಾಯಿ, ಮತ್ತು ಕುಟುಂಬಸ್ಥರು ಎಲ್ಲರೂ ಹೋಗಿದ್ದು, ಮಧ್ಯಾಹ್ನ 3 ಗಂಟೆಗೆ ವಾಪಸ್ಸು ಬಂದಿರುತ್ತೇವೆ. ಆಗ ಮನೆಯ ಮುಖ್ಯ ದ್ವಾರವನ್ನು ಒಡೆದಿದ್ದು ಕೊಂಡಿಯನ್ನು ಮುರಿದು ಕಳ್ಳರು ಒಳಗೆ ಹೋಗಿದ್ದು, ನಾವು ಹೋಗಿ ನೋಡಿದಾಗ ಒಳಗಿನ ಒಂದು ರೂಂನಲ್ಲಿ ಗೊದ್ರೇಜು ಒಡೆದಿತ್ತು. ಅಡುಗೆ ಮನೆಯ ಹಿಂದಿನ ಬಾಗಿಲನ್ನು ತೆಗೆದು ಹೊರಗೆ ಹೋಗಿರುವುದು ಕಂಡು ಬರುತ್ತಿತ್ತು. ಗೊದ್ರೇಜು ಒಡೆದಿದ್ದ ರೂಂನಲ್ಲಿ ಬಟ್ಟೆಗಳು ಚೆಲ್ಲಾಪಿಲ್ಲೆಯಾಗಿತ್ತು. ಅಲ್ಲಿ ಇರಿಸಿದ್ದ ಸೇಫ್ ಲಾಕರ್ ನ್ನು ಒಡೆದು ಅದರಲ್ಲಿ ಇದ್ದ ಚಿನ್ನದ ಆಭರಣಗಳಾದ 3 ಪವನ್ ನ 2 ಎಳೆಯ ಚಿನ್ನದ ಚೈನು-1, 3 ½ ಪವನ್ ತೂಕದ ಲಾಂಗ್ ಚಿನ್ನದ ನೆಕ್ಲೇಸ್-1, 2 ಪವನ್ ತೂಕದ ಚಿನ್ನ ತಾಳಿ ಸರ-1, ½ ಪವನ್ ತೂಕದ ನೆಕ್ಲೆಸಿನ ಚಿನ್ನದ ಡಾಲರ್-1, 4 ಗ್ರಾಮ ತೂಕದ ಚಿನ್ನದ ಉಂಗುರ-1, 4 ಗ್ರಾಂ ತೂಕದ ಚಿನ್ನದ ನಾಣ್ಯ-1, 5 ಗ್ರಾಂ ತೂಕದ ಚಿನ್ನದ ಬೆಂಡೋಲೆ-1 ಜೊತೆ, 1ಗ್ರಾಂ ತೂಕದ ಚಿನ್ನದ ಬೆಂಡೋಲೆ-1 ಜೊತೆ, 3 ಗ್ರಾಂ

ತೂಕದ ಚಿನ್ನದ ಉಂಗುರ-1, 4 ಗ್ರಾಂ ತೂಕದ ಚಿನ್ನದ ಬೆಂಡೋಲೆ-1ಜೊತೆ, 3 ಗ್ರಾಂ ತೂಕದ ಚಿನ್ನದ ಬೆಂಡೋಲೆ -1 ಜೊತೆ, 3 ಗ್ರಾಂ ತೂಕದ ಚಿನ್ನದ ಕಿವಿಯ ರಿಂಗ್ -1 ಜೊತೆ, 9 ಗ್ರಾಂ ತೂಕದ ಚಿನ್ನದ ಸಣ್ಣ ನೆಕ್ಲೇಸ್-1, 1 ಗ್ರಾಂ ತೂಕದ ಚಿನ್ನದ ಮೂಗುತಿ-1, 1 ಗ್ರಾಂ ತೂಕದ ಬೆಂಡೋಲೆ 1 ಜೊತೆ, 4 ಗ್ರಾಂ ತೂಕದ ಚಿನ್ನದ ಲಕ್ಷ್ಮೀ ಪೆಂಡೆಂಟ್-1, 10 ಗ್ರಾಂ ತೂಕದ ಬಾತುಕೋಳಿ ಕಿವಿಯ ಚಿನ್ನದ ಓಲೆ 1 ಜೊತೆ, 1 ಗ್ರಾಂ ತೂಕದ ಚಿನ್ನದ ಸರ-2, 1 ಗ್ರಾಂ ಕಿವಿಯ ಓಲೆ-2, 10 ಗ್ರಾಂನ 2 ಬೆಳ್ಳಿಯ ನಾಣ್ಯ ಹಾಗೂ ನಗದು ರೂಪಾಯಿ 8,000/-, ಪ್ಲಾಸ್ಟಕ್ ಡಬ್ಬಿಯಲ್ಲಿ ಇದ್ದ ನಾಣ್ಯಗಳು, 2 ವಾಚ್, 2 ಬೆಳ್ಳಿ ನಾಣ್ಯಗಳು ಕಳುವು ಆಗಿದ್ದು, ಅವುಗಳ ಮೌಲ್ಯ ಆ ವೇಳೆಗೆ ರೂಪಾಯಿ 2,72,000/- ಆಗಿತ್ತು. ಸದ್ರಿ ದಿನ ಸಂಜೆ 6-30ರ ವೇಳೆಗೆ ದೂರನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಚಿನ್ನಭಾರಣಗಳ ಫೋಟೋ ಪಿ.ಎಫ್ ನಂಬ್ರ169/2014ರಂತೆ ವಶಕ್ಕೆ ಪಡೆದಿರುವ ಯಾವುದೇ ಮಾಲುಗಳನ್ನು ನ್ಯಾಯಾಲಯದ ಮುಂದೆ ಈವರೆಗೂ ಕುಂದಾಪುರ ಪೊಲೀಸರು ಹಾಜರುಪಡಿಸದೆ ಇದ್ದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಠಾಣಾಧಿಕಾರಿಯವರಿಗೆ ಕಾರಣ ಕೇಳಿ ನೋಟಿಸು ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**